ಇದಕ್ಕೆ ನಾವು ಒಪ್ಪುವುದಿಲ್ಲ. ನಾವು ಇದನ್ನು ಒಪ್ಪುವುದಿಲ್ಲವಾದ ಕಾರಣ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಇವರು ತಮ್ಮ ಬೇಳಿಕಾಳನ್ನು ಬೇಯಿಸಿ ಕೊಳ್ಳುವುದಕ್ಕೆ ಹೋಗುತ್ತಾರೆ. ಇವರಿಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲ. ನಾಳೆ ಮುಖ್ಯಮಂತ್ರಿಗಳು ಬಂದ ಮೇಲೆ ಇಲ್ಲಿ ಹೇಳಿಕೆಯನ್ನು ಕೊಡುತ್ತಾರೆ ಎಂದು ಈಗಾಗಲೇ ಹೇಳಿ ಪದೇ ಪದೇ ನಮ್ಮ ನಿಲುವಿನ ಬಗ್ಗೆ ಸ್ಪಷ್ಟವಾಗಿ ಹೇಳುತ್ತಲೇ ಇದ್ದೇನೆ. ನಾನು ಈಗಾಗಲೇ ಕ್ಲಿಯರ್ ಆಗಿ ಹೇಳಿರುವಂತೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯೂ ಇಲ್ಲ. ಅವರು ಕಮಿಟಿಯನ್ನು ಮಾಡಿದ ತಕ್ಷಣ ರಾತ್ರಿಯಲ್ಲಿಯೇ ಎಲ್ಲಾ ಹೊರಟುಹೋಗಿ ಬಿಟ್ಟಿತು ಎನ್ನುವ ರೀತಿಯಲ್ಲಿ ರಾಜಕಾರಣದ ಮಾತುಗಳನ್ನು ಅವರು ಅಂದರೆ ನಾವೂ ಕೂಡ ರಾಜಕೀಯದ ಮಾತುಗಳನ್ನು ಆಡಬೇಕಾಗುತ್ತದೆ. ನಾವು ಇಮವರೆಗೆ ರಾಜ್ಯದ ಹಿತವನ್ನು ಕಾಪಾಡುವುದಕ್ಕೋಸ್ಕರ ಸದುದ್ದೇಶದಿಂದ ಮಾತನಾಡುತ್ತಿದ್ದೆವು. ನೀವು ಕೂಡ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಮತ್ತು ನಾವೂ ಕೂಡ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ನಾವು ಕೆಲಸ ನಿಲ್ಲಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಹಿಂದೆಯೂ ಇದೇ ರೀತಿ ಆಗಿತ್ತು. ಬೆಳಿಗ್ಗೆ ಕಾವೇರಿ ಜಲಾಶಯದ ಕನ್ನಂಬಾಡಿಯಲ್ಲಿ ನೀರು ಇಲ್ಲ ಎಂದು ಹೇಳಿ ಸಾಯಂಕಾಲ ನೀಲನ್ನು ಬಿಟ್ಟರು. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಒಂದನ್ನು ಹೇಳಿ ಸಾಯಂಕಾಲ ಒಂದನ್ನು ಹೇಳಿದರು. ಆದ್ದರಿಂದ ಎಕ್ಸ್‌ಪರ್ಟ್ಸ್ ಕಮಿಟಿಯವರನ್ನು ಇಲ್ಲಿಗೆ ಬರುವುದಕ್ಕೆ ಬಿಡುವುದಿಲ್ಲ ಎಂದು ನೀವು ಹೇಳಬೇಕು. ಆ ರೀತಿಯಲ್ಲಿ ಹೇಳದಿದ್ದರೆ ನೀವು ಈ ರಾಜ್ಯದ ಜನತೆಗೆ ದ್ರೋಹ ಮಾಡಿದ ರೀತಿ ಆಗುತ್ತದೆಂದು ಹೇಳಿ ನಾವೂ ಕೂಡ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಯಡಿಯೂರಪ್ಪನವರು ಧರಣಿಗೆ ಬಂದು ಮಾತನಾಡುತ್ತಿರುವಾಗಲೇ ಎಲ್ಲಾ ಬಿ.ಜೆ.ಪಿ. ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ಪಾಲ್ಗೊಂಡರು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತಮ್ಮ ಸ್ವಸ್ಥಾನದಲ್ಲೇ ಇದ್ದರು)

ಶ್ರೀ ಸಿದ್ದರಾಮಯ್ಯ : ಈ ವಿಷಯದ ಬಗ್ಗೆ ವಿಚಾರ ಮಾಡುವುದಕ್ಕೆ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಇಲ್ಲಿ ನಾನು ಉತ್ತರ ಕೊಡುವುದಕ್ಕೆ ಇದ್ದೇನೆ. ನನ್ನನ್ನು ಕೇಳಿ, ಅದನ್ನು ಬಿಟ್ಟು ಅವರು ಏಕೆ ಹೊರಟು ಹೋಗಿದ್ದಾರೆ, ಇವರು ಏಕೆ ಹೊರಟುಹೋಗಿದ್ದಾರೆ ಎಂದು ಕೇಳಿದರೆ... ಬಿಸಿನೆಸ್ ನಡೆಸುವ ಅಧ್ಯಕ್ಷರು ಇಲ್ಲಿ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯದ ಹಿತಕ್ಕೆ ಈಗ ಅನ್ಯಾಯವಾಗುತ್ತಿದೆ.

ಶ್ರೀ ಸಿದ್ದರಾಮಯ್ಯ : ಓಹೋಹೋ ಅನ್ಯಾಯವಾಗುತ್ತಿದೆ. ಈ ರೀತಿಯ ರಾಜಕೀಯ ಬೇಡ. ಈ ಸರ್ಕಾರ ರಾಜ್ಯದ ಹಿತಕ್ಕೆ ಅನ್ಯಾಯ ಆಗುವುದಕ್ಕೆ